ಲೋಕಕ್ಕೊಂದು ನಿದರ್ಶನ ಸಿಕ್ಕಿತು. ಅಷ್ಟೇ ಅಲ್ಲ ಮತ್ತೊಬ್ಬರ ಚಟುವಟಿಕೆಯಲ್ಲಿ ಮೂಗು ತೂರಿಸಲು ಪ್ರಯತ್ನಿಸುವವರಿಗೆ ತಕ್ಕಶಾಸ್ತಿ ಆಗುತ್ತದೆ ಎಂಬುದು ಶುಕ್ರಾಚಾರ್ಯರ ಪ್ರಕರಣದಿಂದ ಗೊತ್ತಾಯಿತು ಎಂದೂ ಹೇಳಿದರು.

* * *

ಈ ಸಂಗತಿ ನಡೆದು ಕೆಲವು ದಿನಗಳು ಕಳೆದಿರಬೇಕು. ಅಪ್ಪಯ್ಯ ಮತ್ತು ನಾನು ನಿಮ್ಮನ್ನು ಭೇಟಿಯಾದೆವಲ್ಲ ಆ ದೇವಸ್ಥಾನಕ್ಕೆ ಹೋಗಿದ್ದೆವು. ಅಲ್ಲಿ ನಾನು ಮೊನ್ನೆಯಂತೆಯೇ ಉರುಳು ಸೇವೆ ಮಾಡುತ್ತಿದ್ದೆ. ನಾನು ಉರುಳು ಸೇವೆ ಮಾಡುವುದಕ್ಕೂ ಒಂದು ಕಾರಣವಿದೆ. ಅದೇಕೋ ಏನೋ ನನಗೆ ಇದ್ದಕ್ಕಿದ್ದಂತೆ ಮೈಕೈಗಳಲ್ಲೆಲ್ಲ ನೋವು ಕಾಣಿಸಿಕೊಳ್ಳತೊಡಗಿತ್ತು. ವೈದ್ಯರಲ್ಲಿ ತೋರಿಸಿದರು ಅಪ್ಪಯ್ಯ. ವೈದ್ಯರು ನೀವು ಮೈಮುರಿದು ದುಡಿಯುವುದಿಲ್ಲ ಎನ್ನಿಸುತ್ತದೆ. ಹಾಗಾಗಿ ನಿಮ್ಮ ಮೈಯಲ್ಲಿ ಕೊಬ್ಬು ಶೇಖರಗೊಳ್ಳತೊಡಗಿದೆ. ಹೀಗೆಯೇ ಮುಂದುವರಿದರೆ ಕ್ರಮೇಣ ನಿಮ್ಮ ತೂಕ ಹೆಚ್ಚಾಗಬಹುದು. ನೀವು ನಡೆದಾಡಲೂ ಕಷ್ಟ ಪಡಬೇಕಾಗಬಹುದು ಎಂದು ಹೇಳಿದರು. ನನಗಿಲ್ಲಿ ಮೈಮುರಿದು ದುಡಿಯುವ ಕೆಲಸ ಇಲ್ಲ. ತೋಟಕ್ಕೆ ಹೋದರೆ ಕೆಲಸ ಮಾಡಿ ಮೈ ಕರಗಿಸಬಹುದು. ಆದರೆ ಅಲ್ಲಿಗೆ ಹೋಗಿ ಕೆಲಸ ಮಾಡುವುದು, ಕಾಲೇಜಿಗೆ ಹೋಗಿ ಓದನ್ನು ಮುಂದುವರಿಸುವುದು ಅಸಾಧ್ಯದ ಮಾತು ಎಂಬಂತಾಯಿತು. ಒಂದು ದಿನ ನಾನು ನನ್ನ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಾಗ ನಿನ್ನ ಕೊಬ್ಬು ಕರಗಿಸಲು ತೋಟಕ್ಕೇ ಹೋಗಬೇಕು ಎಂದು ಏಕೆ ಅಂದುಕೊಳ್ಳುತ್ತೀಯಾ? ಇಲ್ಲಿಯೇ ಇದೆಯಲ್ಲ ದೊಡ್ಡ ಪ್ರಾಂಗಣವುಳ್ಳ ದೇವಸ್ಥಾನ, ಅಲ್ಲಿಗೆ ಹೋಗಿ ನಿತ್ಯವೂ ಪ್ರದಕ್ಷಿಣೆ ಹಾಕು, ನಿನಗೆ ವ್ಯಾಯಾಮವೂ ಆದಂತಾಗುತ್ತದೆ. ಅಪ್ಪಯ್ಯನಿಗೆ ಮನೆಯಿಂದ ಹೊರಗೆ ಹೋದಂತೂ ಆಗುತ್ತದೆ ಎಂದು ಮಾತುಮಾತಿನ ಮಧ್ಯೆ ಸಲಹೆ ನೀಡಿದರು ಸ್ನೇಹಿತರು. ಅವರು ತಮಾಷೆಗಾಗಿ ಆ ರೀತಿ ಸಲಹೆ ನೀಡಿದ್ದರೋ, ನಿಜಕ್ಕೂ ಸಲಹೆ ನೀಡಿದ್ದರೋ ಗೊತ್ತಿಲ್ಲ. ಅವರ ಮಾತು ಸರಿ ಎನ್ನಿಸಿತು. ಅಂದಿನಿಂದ ನಾನು ಪ್ರತಿದಿನವೂ ಕಾಲೇಜು ಮುಗಿಸಿಕೊಂಡು ಬಂದ ನಂತರ ಇಲ್ಲಿಗೆ ಅಪ್ಪಯ್ಯನನ್ನೂ ಕರೆದುಕೊಂಡು ಬಂದು ಪ್ರದಕ್ಷಿಣೆ ಹಾಕತೊಡಗಿದೆ. ಆದರೆ ಈ ಪ್ರದಕ್ಷಿಣೆ ಚಟುವಟಿಕೆ ನಾನು ಅಂದುಕೊಂಡಷ್ಟು ಪರಿಣಾಮಕಾರಿ ಆಗಲಿಲ್ಲ. ಒಂದು ದಿನ ಬೆಳಗ್ಗೆ ದೇವಸ್ಥಾನಕ್ಕೆ ನಾನೊಬ್ಬಳೇ ಬಂದಿದ್ದೆ. ಆಗ ಇಲ್ಲಿ ಒಬ್ಬರು ಉರುಳುಸೇವೆ ಮಾಡುತ್ತಿದ್ದರು. ಅದನ್ನು ಕಂಡು ಇದು ಪ್ರದಕ್ಷಿಣೆಗಿಂತ ಹೆಚ್ಚು ಪರಿಣಾಮಕಾರಿ ಎನ್ನಿಸಿತು. ಆಗಿನಿಂದ ಪ್ರದಕ್ಷಿಣೆಯ ಜೊತೆಗೆ ವಾರಕ್ಕೆ ಒಮ್ಮೆಯೋ ಅಥವಾ ಎರಡು ಬಾರಿಯೋ ಉರುಳು ಸೇವೆ ಮಾಡುವುದನ್ನು ನಾನು ರೂಢಿಸಿಕೊಂಡೆ. ನಂತರ ನನ್ನ ಆರೋಗ್ಯ ಸುಧಾರಿಸಿತು. ಹಾಗೆಂದು ದಿಂಡು ಉರುಳುವುದರಿಂದ ಎಲ್ಲರ ಕೊಬ್ಬು ಕರಗುತ್ತದೆ, ಆರೋಗ್ಯ ಸುಧಾರಿಸುತ್ತದೆ ಎಂದು ನಾನು ಶಿಫಾರಸು ಮಾಡಲಾರೆ. ಏಕೆಂದರೆ ನನ್ನ ದೈಹಿಕ ಪ್ರಕೃತಿಗೆ ಇದು ಹೊಂದಿಕೊಂಡಿದೆ, ಮಾಡುತ್ತಿದ್ದೇನೆ. ಇದಕ್ಕೆ ವೈಜ್ಞಾನಿಕವಾಗಲೀ, ಆರೋಗ್ಯದ ಕಾರಣವಾಗಲೀ ಇದೆ ಎಂದು ಸರ್ಟಿಫೈ ಮಾಡಲಾರೆ. ಏಕೆಂದರೆ ನಾನು ಆ ದಿಕ್ಕಿನಲ್ಲಿ ಯಾವೊಂದು ಲಾಜಿಕಲ್ ಸ್ಟಡಿ ಮಾಡಿಲ್ಲ. ಆದರೆ ನನ್ನ ಆರೋಗ್ಯ ಸುಧಾರಿಸಿದೆ ಎಂದಷ್ಟೇ ಹೇಳಬಲ್ಲೆ ಎಂದು ಷರಾ ಬರೆದಂತೆ ಹೇಳಿದಳು ಶಾರ್ವರಿ.

* * *

ನಿಮ್ಮ ಹಾಗೆಯೇ ಕ್ಷೇತ್ರದರ್ಶನಕ್ಕೆಂದು ಬಂದಿದ್ದ ಕುಟುಂಬವೊಂದು ತಮಗೆ ಉಳಿದುಕೊಳ್ಳಲು ವ್ಯವಸ್ಥೆಯಿಲ್ಲ ಎಂದು ಪರದಾಡುತ್ತಿತ್ತು. ಇದನ್ನು ಕಂಡ ಅಪ್ಪಯ್ಯ ಅವರ ಬಳಿಗೆ ಹೋಗಿ ನಿಮಗೇನೂ ಅಭ್ಯಂತರ ಇಲ್ಲ ಎಂದಾದರೆ ನಮ್ಮಲ್ಲಿ ಬಂದು ಉಳಿದು ಕೊಳ್ಳಿ ಎಂದು ಹೇಳಿದರು. ಅವರೂ ಮೊದಲು ನಿಮ್ಮ ಹಾಗೆಯೇ ಅನುಮಾನಪಟ್ಟರು. ಆಮೇಲೆ ಏನನ್ನಿಸಿತೋ ನಮ್ಮ ಮನೆಗೆ ಬರಲು ಒಪ್ಪಿದರು. ಬಂದರು, ಒಂದೆರಡು ದಿನ ಇದ್ದರು. ಇಲ್ಲಿಯೇ ಸುತ್ತಮುತ್ತ ಇರುವ ಸ್ಥಳಗಳನ್ನು ನೋಡಿದರು. ಇವರನ್ನು ಉಪಚರಿಸುವ ದಿಶೆಯಲ್ಲಿ ಅಪ್ಪಯ್ಯ ಅವರು ಇದ್ದಷ್ಟು ಸಮಯ ಅತ್ಯಂತ ಚುರುಕಿನಿಂದ ಇದ್ದರು. ಅವರ ಜೊತೆ ಹರಟೆ ಕೊಚ್ಚಿದರು. ಮನೆಯಲ್ಲಿ ಅತಿಥಿಗಳು ಇದ್ದಷ್ಟು ಸಮಯ ಅವರ ಮುಖದಲ್ಲಿ ಇದ್ದ ಸಂತೋಷ, ನೆಮ್ಮದಿ, ಖುಷಿ, ಧನ್ಯತಾಭಾವವನ್ನು